ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 2, Sep-Oct 2020, 148-154
©*IIMRD*, Mysuru
IIMRD JOURNALS
www.iimrd.com

# ಗಾಂಧಿನಗರದಲ್ಲಿ ಗರಡಿಮನೆ: ಸಾಂಸ್ಕೃತಿಕ ಅವಲೋಕನ

ಜಯದೇವ.ಎಂ.[1] ಮತ್ತು ಪ್ರೊ. ನಂಜಯ್ಯ ಹೊಂಗನೂರು[2]

**ಪೀಠಿಕೆ**

ಪ್ರಾಚೀನ ಹಿನ್ನೆಲೆಯನ್ನು ಹೊಂದಿರುವ ಕುಸ್ತಿಯು ಭಾರತೀಯರ ಜೀವನ ಸಂಪ್ರದಾಯಗಳಲ್ಲಿ ಹಾಸುಹೊಕ್ಕಾಗಿದೆ. ಮೈಸೂರು ರಾಜರ ಮತ್ತು ಪಾಳೇಗಾರರ ಆಡಳಿತಕ್ಕೆ ಒಳಪಟ್ಟಿದ್ದರಿಂದ ಯುದ್ಧಗಳು ಸಾಮಾನ್ಯವಾಗಿತ್ತು. ರಾಜ್ಯಗಳ ರಕ್ಷಣೆಗಾಗಿ ಹೋರಾಟ ಅನಿವಾರ್ಯವಾಗಿತ್ತು. ಆಯುಧಗಳನ್ನು ಬಳಸಿ ಯುದ್ಧ ಮಾಡುವುದು ಒಂದು ಬಗೆಯಾದರೆ; ಆಯುಧಗಳನ್ನು ಬಳಸದೆ ಯುದ್ಧ ಮಾಡುವುದು ಇನ್ನೊಂದು ಬಗೆ. ಆ ಎರಡನೇ ಬಗೆಯೇ ಕುಸ್ತಿ. ಇದನ್ನು ದ್ವಂದ್ವ ಯುದ್ಧ, ಮಲ್ಲಯುದ್ಧ ಮುಷ್ಟಿಯುದ್ಧವೆಂತಲೂ ಕರೆಯುವುದು ಉಂಟು. ತಮ್ಮ ಆಳ್ವಿಕೆಯ ನೆಲವನ್ನು ರಕ್ಷಿಸಿಕೊಳ್ಳಲು ಜಟ್ಟಿಗಳ ಅವಶ್ಯಕತೆಯಿತ್ತು. ಆದ್ದರಿಂದಲೇ ರಾಜ ಮಹಾರಾಜರು ಈ ಕ್ರೀಡೆಗೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡುತ್ತಿದ್ದರು.

ಮೈಸೂರು ಒಡೆಯರುಗಳಲ್ಲಿ ಒಬ್ಬರಾದ ರಣಧೀರ ಕಂಠೀರವ ನರಸಿಂಹರಾಜ ಒಡೆಯರು ಸ್ವತಃ ಜಟ್ಟಿಗಳಾಗಿದ್ದರು. ದೈಹಿಕ ಬಲಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇದ್ದು, ಪ್ರತಿಷ್ಠೆಯ ಪ್ರಶ್ನೆಯೂ ಆಗಿತ್ತು. ಯಾರು ಎಷ್ಟು ಸಮರ್ಥರು ಎಂಬುದನ್ನು ಪರೀಕ್ಷಿಸುವುದಕ್ಕಾಗಿ ಕುಸ್ತಿ ಪಂದ್ಯಗಳನ್ನು ಏರ್ಪಡಿಸುತ್ತಿದ್ದರು. ವಿಶ್ವವಿಖ್ಯಾತ ಮೈಸೂರು ದಸರಾದಲ್ಲಿ ನಡೆಯುವ ಅನೇಕ ವಿಶೇಷ ಕಾರ್ಯಗಳಲ್ಲಿ 'ಜಟ್ಟಿಕಾಳಗ'ವು ಒಂದು. ಅರಮನೆಯ ಒಳಾಂಗಣದಲ್ಲಿ ಇಂದಿಗೂ ಸಹ ಗರಡಿ ಕಲೆಯನ್ನು ಸಾಂಪ್ರದಾಯಿಕವಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಇದನ್ನು ಗಮನಿಸಿದಾಗ ಗರಡಿ ಕಲೆಗೆ ಮೈಸೂರು ಒಡೆಯರು ಪ್ರೋತ್ಸಾಹ, ಸಹಕಾರ ನೀಡುತ್ತಾ ಬಂದಿರುವುದರಿಂದ ಕುಸ್ತಿಯ ತವರು ಮೈಸೂರು ಎಂದು ಸ್ಪಷ್ಟವಾಗುತ್ತದೆ. ಕುಸ್ತಿ ಕಲೆಯು ಎಲ್ಲರಿಗೂ ಸಾಧ್ಯವಾಗುವಂಥದ್ದಲ್ಲ. ಏಕೆಂದರೆ ಕುಸ್ತಿಗೆ ಬಲದ ಜೊತೆಗೆ ತಂತ್ರವೂ ಕೂಡ ಮುಖ್ಯ. ಈ ತಂತ್ರಗಳನ್ನು ಕಲಿಯುವುದಕ್ಕಾಗಿಯೇ ಜನರು ಕುಸ್ತಿ ಸಾಧನೆಗೆಂದೇ ಮನೆಯನ್ನು ಮಾಡಿಕೊಂಡು, ಅದಕ್ಕೆ ಬೇಕಾದ ಎಲ್ಲ ಸಲಕರಣೆಗಳನ್ನು ಇಡುತ್ತಿದ್ದರು. ಪೈಲ್ವಾನರು ದಿನವೂ ಅಲ್ಲಿ ಕಸರತ್ತುಗಳನ್ನು ಮಾಡುತ್ತಿದ್ದರು. ರಾಜ ಮಹಾರಾಜರಿಂದ ಹಿಡಿದು ಸಾಮಾನ್ಯ ಪೈಲ್ವಾನರುಗಳು ಆರೋಗ್ಯದ ದೃಷ್ಟಿಯಿಂದ ಅಂಗ ಸಾಧನೆಗೈಯಲು ಮಾಡಿಕೊಂಡ ಮನೆಗಳೇ ಗರಡಿ ಮನೆ. ಗರಡಿ ಎಂದರೆ ದೈಹಿಕ ಕಸರತ್ತಿನ ಅಥವಾ ಅಂಗ ಸಾಧನೆಯ ಕೇಂದ್ರ ಎಂದು ಕರೆಯಬಹುದು.

---

[1] *ಸಂಶೋಧಕರು, ಕನ್ನಡ ವಿಭಾಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.*

[2] *ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.*

**ಗಾಂಧಿನಗರದಲ್ಲಿ ಗರಡಿಮನೆ**

ಗರಡಿಮನೆಯು ಗಾಂಧಿನಗರದಲ್ಲಿ 1887ರಲ್ಲಿ ಮೈಸೂರು ಒಡೆಯರ ಆಳ್ವಿಕೆಯ ಕಾಲದಲ್ಲಿ ಸ್ಥಾಪನೆಯಾಯಿತು. ಈ ಗರಡಿಮನೆ ಸ್ಥಾಪನೆಯಾಗಲು ಕಾರಣ ಹಿಂದೆ ರಾಜರ ಆಸ್ಥಾನದಲ್ಲಿ ಮಲ್ಲವಿದ್ಯೆ ಪ್ರಕ್ರಿಯೆಯಲ್ಲಿ ಮೇಲ್ವರ್ಗದ ಜನಾಂಗಕ್ಕೆ ಅವಕಾಶವಿತ್ತು. ದಲಿತರು, ಅಸ್ಪೃಶ್ಯರು, ಪಂಚಮರು ಹಾಗೂ ಅಲ್ಪಸಂಖ್ಯಾತರಿಗೆ ಕುಸ್ತಿ ಕ್ರೀಡೆಯಲ್ಲಿ ಭಾಗವಹಿಸಲು ಅವಕಾಶವಿರಲಿಲ್ಲ. ಆ ಕಾರಣದಿಂದ 1887ರಲ್ಲಿ ವೀರನಗೆರೆಯಲ್ಲಿ ದೊಡ್ಡ ಗರಡಿ ಮನೆ ಸ್ಥಾಪನೆಯಾಯಿತು. ಆಗ ಅರಮನೆ ಮುಂಭಾಗದಲ್ಲಿ ಅಸ್ಪೃಶ್ಯರಿಗೂ ಹಾಗೂ ಅಲ್ಪಸಂಖ್ಯಾತರ ಜೊತೆ ಮಾತ್ರ ಕುಸ್ತಿ ಕ್ರೀಡೆಗಳು ನಡೆಯುತ್ತಿದ್ದವು. ಅನಂತರದ ದಿನಗಳಲ್ಲಿ ಈ ಜಾತಿ ಸಂಘರ್ಷದ ಕಾರಣದಿಂದಾಗಿ ದಲಿತರ ಜೊತೆ ದಲಿತರು ಮಾತ್ರ ಮಲ್ಲಯುದ್ಧ ಮಾಡಬೇಕು ಎಂಬ ನಿಯಮಗಳು ಜಾರಿಯಾದವು.

ಗಾಂಧಿನಗರದ ಜನರಿಗೆ ಕುಸ್ತಿಯಲ್ಲಿ ಇದ್ದ ಆಸಕ್ತಿ ನೋಡಿ ಗರಡಿ ಮನೆಗಳು ನಿರ್ಮಾಣವಾದವು. ಇಲ್ಲಿ ಪ್ರಮುಖವಾಗಿ ದೊಡ್ಡ ಗರಡಿ, ಚಿಕ್ಕಗರಡಿ, ಹತ್ತು ಜನರ ಗರಡಿ ಮತ್ತು ಹೊಸ ಗರಡಿ ಎಂಬ ನಾಲ್ಕು ಗರಡಿ ಮನೆಗಳಿವೆ.

ಗರಡಿ ಮನೆಗಳ ಸ್ಥಾಪನೆಯ ಉದ್ದೇಶವೇ ಕುಸ್ತಿ ತರಬೇತಿ ನೀಡುವುದು. ಅಲ್ಲದೆ ಭಜನೆ ಮಾಡುವುದು, ಊರಿನಲ್ಲಿ ಯಾರಾದರೂ ಮರಣ ಹೊಂದಿದ ಸಂದರ್ಭದಲ್ಲಿ ರಾತ್ರಿ ಕಾಲ ಸರಿಸಲು ತತ್ವ ಪದಗಳನ್ನು ಹಾಡುವುದು, ಲಾವಣಿ ಗೀತೆಗಳನ್ನು ಹಾಡಲಾಗುತ್ತಿತ್ತು ಹಾಗೂ ಅವುಗಳ ತರಬೇತಿ ಕೇಂದ್ರಗಳಾಗಿಯೂ ಕಾರ್ಯನಿರ್ವಹಿಸುತ್ತಿತ್ತು. ಅಲ್ಲದೆ ದೊಣ್ಣೆವರಸೆ, ಕತ್ತಿವರಸೆ, ಪಟ್ಟವರಸೆ ಮೊದಲಾದ ಜಾನಪದ ಕಲೆಗಳ ಕ್ರೀಡಾ ಚಟುವಟಿಕೆಗಳ ತರಬೇತಿ ಕೇಂದ್ರವಾಗಿದ್ದವು.

ಅಷ್ಟೇ ಅಲ್ಲದೆ ಹಿಂದೆ ಗರಡಿ ಮನೆ ನ್ಯಾಯಸ್ಥಾನಗಳಾಗಿ ಕಾರ್ಯನಿರ್ವಹಿಸುತ್ತಿತ್ತು ಹಾಗೂ ಜನರ ಸಮಸ್ಯೆಗಳನ್ನು ಕುಲಸ್ಥರ ಸಮ್ಮುಖದಲ್ಲಿ ಬಗೆಹರಿಸುವುದರ ಮೂಲಕ ಪರಿಹಾರ ನೀಡುತ್ತಿತ್ತು. ಮದುವೆ, ಸಾವು–ನೋವು ಇಂತಹ ವಿಶೇಷ ಸಂದರ್ಭಗಳಲ್ಲಿ ತನ್ನ ಸಕ್ರಿಯ ಭಾಗವಹಿಸುವಿಕೆಯನ್ನು ವ್ಯಕ್ತಪಡಿಸುತಿತ್ತು. ಊರಿನ ಯುವಕರಿಗೆ ಗರಡಿ ಮನೆಯು ಅಭ್ಯಾಸದ ಸ್ಥಳವಾಗಿ ಕಲಿಕಾ ಪಾಠಶಾಲೆಗಳಾಗಿ ಊರಿನ ಜನರಿಗೆ ಮನರಂಜನೆಯ ಕೇಂದ್ರಗಳಾಗಿದ್ದವು.

ಗರಡಿಗೆ ಸಂಬಂಧಿಸಿದ ಯಾರೇ ಆಗಲಿ ಗರಡಿ ಮನೆ ಪ್ರವೇಶಿಸುವ ಮುನ್ನ ಕಾಲುಗಳನ್ನು ತೊಳೆದು ಹೊಸ್ತಿಲನ್ನು ಕಣ್ಣಿಗೆ ಒತ್ತಿಕೊಂಡು ನಂತರವೇ ಒಳ ಪ್ರವೇಶಿಸಬೇಕು. ಗರಡಿ ಮನೆ ಪ್ರವೇಶಿಸಿದ ನಂತರ ಗರಡಿಯಲ್ಲಿ ಅಭ್ಯಾಸ ಮಾಡುವ ಪೈಲ್ವಾನರಿಗೆ ಹನುಮಂತ ಮತ್ತು ಅಂಬಾತಾಯಿ ಆರಾಧ್ಯದೈವಗಳು. ಗರಡಿ ಮನೆಯ ಪ್ರವೇಶವನ್ನು ಮಾಡಿ 'ಮಟ್ಟಿ' (ಮಣ್ಣು)ಯಲ್ಲಿ ತಾಲೀಮು ಮಾಡುವ ಮುನ್ನ ಹನುಮಂತ, ಶಿವನ ಭಾವಚಿತ್ರ ಹಾಗೂ ತರಬೇತಿ ನೀಡುವ ಉಸ್ತಾದ್ ಮತ್ತು ಖಲೀಪರಿಗೆ ನಮಸ್ಕರಿಸಿ, ಅನಂತರ ತರಬೇತಿ ಪ್ರಾರಂಭಿಸುತ್ತಿದ್ದರು. ದೈಹಿಕ ಬಲಸಂವರ್ಧನೆಗಾಗಿ ಮಾಡುವ ಕುಸ್ತಿಯೂ ಧಾರ್ಮಿಕ ನೆಲೆಗಟ್ಟನ್ನು ಪಡೆದುಕೊಂಡಿದೆ. ಹಾಗೆಯೇ ಗರಡಿ ಮನೆಗಳಿಗೆ ಹೆಣ್ಣು ಮಕ್ಕಳಿಗೆ ಪ್ರವೇಶವನ್ನು ನಿರ್ಬಂಧಿಸಲಾಗಿದೆ.

**ಗರಡಿ ಮನೆಗಳ ವಿನ್ಯಾಸ**

ಈಗಾಗಲೇ ತಿಳಿದಿರುವಂತೆ ಗಾಂಧಿನಗರದಲ್ಲಿ ನಾಲ್ಕು ಗರಡಿ ಮನೆಗಳಿದ್ದು, ದೊಡ್ಡ ಗರಡಿ ಮನೆಯು 1887ರಲ್ಲಿ ಸ್ಥಾಪನೆಯಾಗಿದೆ. ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಈ ಗರಡಿ ಮನೆಯ ಜಾಗವನ್ನು ವಿಶೇಷವಾಗಿ ಗಾಂಧಿನಗರದ ದಲಿತ ಸಮುದಾಯಕ್ಕೆಂದೇ 60ಥ60ರ ನಿವೇಶನವನ್ನು ದಾನದ ರೂಪದಲ್ಲಿ ನೀಡಿದರು. ಇದರಲ್ಲಿ 30ಥ30ರ ಜಾಗದಲ್ಲಿ ಹನುಮಂತನ ಗದ್ದಿಗೆ ಮಾಡಿಕೊಂಡಿದ್ದಾರೆ. ಉಳಿದಂತೆ ತಮ್ಮ ತಾಲೀಮಿಗೆ ಮೀಸಲಿರಿಸಿದ್ದಾರೆ. ಮೊದಲಿಗೆ ಗರಡಿ ಮನೆಗಳೆಲ್ಲವೂ ಹೆಂಚಿನ ಮನೆಗಳ ರೂಪದಲ್ಲಿಯೇ ಇದ್ದವು.

ಚಿಕ್ಕ ಗರಡಿ ಮನೆಯು 1900ರಲ್ಲಿ ಪ್ರಾರಂಭವಾಯಿತು. ಮೊದಲು ಪ್ರಾರಂಭವಾದ ಗರಡಿ ಮನೆಗಳಲ್ಲಿ ಕುಸ್ತಿಪಟುಗಳ ಸಂಖ್ಯೆ ಹೆಚ್ಚಾದ ಕಾರಣ ಹಾಗೂ ಕ್ರೀಡಾ ಅಭ್ಯಾಸಗಳಲ್ಲಿ ಇದ್ದ ಪೈಪೋಟಿ ಮನೋಭಾವನೆ ಮತ್ತು ಕ್ರೀಡಾ ವೈರತ್ವ, ಸಂಘರ್ಷಗಳಿಂದಾಗಿ ತಮ್ಮ ಪೈಲ್ವಾನ್ ಪಟ್ಟಕ್ಕಾಗಿ ಗಲಾಟೆಗಳು ನಡೆಯುತ್ತಿದ್ದವು. ಆ ಸಂದರ್ಭದಲ್ಲಿ ಕೆಲವರು ದೊಡ್ಡ ಗರಡಿ ಮನೆಯನ್ನು ಬಿಟ್ಟು ಹೊರಬಂದು ಈ ಚಿಕ್ಕಗರಡಿ ಪ್ರಾರಂಭಿಸಿದರು. ಊರಿನ ಸ್ಥಳೀಯರಾದ ಪಾಪಣ್ಣನವರು ತಮ್ಮ ಸ್ವಂತ ನಿವೇಶನದ 80ಥ60ರಂತೆ ಮೂರು ಗೀರು ಜಾಗವನ್ನು ದಾನವಾಗಿ ನೀಡಿದರು. ಪ್ರಾರಂಭದಲ್ಲಿ ಪಾಪಣ್ಣನವರ ಗರಡಿ ಎಂದೇ ಹೆಸರುವಾಸಿಯಾಗಿದ್ದು, ಮುಂದೆ ಚಿಕ್ಕ ಗರಡಿಯಾಗಿ ಪರಿವರ್ತನೆಯಾಯಿತು. ಆ ಸಮಯದಲ್ಲಿ ಇಪ್ಪತ್ತೈದು ಕುಟುಂಬಗಳು ದೊಡ್ಡ ಗರಡಿಯಿಂದ ಹೊರಬಂದು ಚಿಕ್ಕ ಗರಡಿ ವ್ಯಾಪ್ತಿಯನ್ನು ಸೇರಿಕೊಂಡವು.ಕಾಲಾನಂತರ 1908ರಲ್ಲಿ 10 ಜನಗಳ ಗರಡಿ ಪ್ರಾರಂಭವಾಯಿತು. ದೊಡ್ಡ ಗರಡಿಯಲ್ಲಿ ಮತ್ತೆ ಕೆಲವೊಂದು ಪದವಿಗಳಿಗೋಸ್ಕರ ಸಂಘರ್ಷಗಳು ನಡೆಯುತ್ತಲಿತ್ತು. ಆಗ ರಾಮಯ್ಯ ಅವರ ನೇತೃತ್ವದಲ್ಲಿ ಅನೇಕ ಕುಟುಂಬಗಳು ಹೊರಬಂದು ಈ ಗರಡಿಯನ್ನು ಪ್ರಾರಂಭಿಸಿದರು. ಇನ್ನು ಹೊಸಗರಡಿಯು ಪೈಲ್ವಾನ್ ಚಲ್ಲಣ್ಣ, ತಿರುಮೂಲಯ್ಯ ಮತ್ತು ಯಜಮಾನ್ ಬೊಮ್ಮಯ್ಯ ಅವರ ನೇತೃತ್ವದಲ್ಲಿ ಪ್ರಾರಂಭವಾಯಿತು. ಹತ್ತು ಜನಗಳ ಗರಡಿಯಲ್ಲಿ ನಡೆದ ಒಳಜಗಳಗಳು, ಅಧಿಕಾರದ ವ್ಯಾಮೋಹದಿಂದ ನಡೆಯುತ್ತಿದ್ದ ಗಲಾಟೆಯಿಂದ ಒಂದಷ್ಟು ಕುಟುಂಬಗಳು ಹೊರಬಂದು ಹೊಸಗರಡಿಯನ್ನು ಪ್ರಾರಂಭಿಸಿದರು. ಗಾಂಧಿನಗರದ ನಾಲ್ಕು ಗರಡಿ ಮನೆಗಳಲ್ಲೂ ಗುಂಪಿನ ಯಜಮಾನಿಕೆಯೂ ಕೂಡ ನಡೆಯುತ್ತಲಿತ್ತು. ಒಂದೊಂದು ಕುಲದವರಿಗೂ ಒಬ್ಬೊಬ್ಬ ದೊಡ್ಡ ಯಜಮಾನ, ಚಿಕ್ಕ ಯಜಮಾನರು ಇರುತ್ತಿದ್ದರು. ಪ್ರಾರಂಭದಲ್ಲಿ ಹದಿನಾಲ್ಕು ಕುಲದವರು ಹದಿನಾಲ್ಕು ಗುಂಪುಗಳಾಗಿ ನಾಲ್ಕು ಗರಡಿ ಮನೆಗಳಲ್ಲಿ ಹಂಚಿಹೋಗಿದ್ದರು. ಒಂದೊಂದು ಕುಲಕ್ಕೆ ಸೇರಿದ ಸದಸ್ಯರ ಮನೆಗಳಲ್ಲಿ ಹಬ್ಬ–ಹರಿದಿನ, ಮದುವೆ–ಒಪ್ಪಂದ, ರಾಜಿ, ಪಂಚಾಯಿತಿ ಸೇರಿದಂತೆ ಪ್ರಮುಖ ನಿರ್ಧಾರಗಳನ್ನು ಕುಲದ ಯಜಮಾನರೇ ನಿರ್ಧರಿಸುತ್ತಿದ್ದರು. ಇವರ ತೀರ್ಮಾನವೇ ಎಲ್ಲಾ ಸದಸ್ಯ ಕುಟುಂಬಗಳಿಗೂ ಅಂತಿಮವಾಗುತ್ತದೆ.

**ಗರಡಿ ಮನೆಗಳು ರಾಮ ಮಂದಿರಗಳಾಗಿ ಬದಲಾವಣೆ**

ಗಾಂಧಿನಗರದ ನಾಲ್ಕು ಗರಡಿ ಮನೆಗಳು ಅನೇಕ ಕುಲಗಳಿಗೆ ಸೇರಿಕೊಂಡವು. ಅವುಗಳು ಕೋಟೆ ಕುಲ, ಬೆಳ್ಳಿ ಕುಲ, ಕಾಲುಂಗರದ ಕುಲ, ಗಾಣಿಗರ ಕುಲ, ವಿಳ್ಯೆ ಕುಲ, ಬೆಲ್ಲದ ಕುಲ, ಹೂವಿನ ಕುಲ ಹೀಗೆ

ಅನೇಕ ಕುಲಗಳಿಗೆ ಸೇರಿಕೊಂಡವು. 1924ರ ನಂತರ ಅಂದರೆ ಗಾಂಧಿನಗರಕ್ಕೆ ಗಾಂಧೀಜಿಯವರ ಭೇಟಿಯಾದ ನಂತರ ಗರಡಿ ಮನೆಗಳು ರಾಮ ಮಂದಿರಗಳಾಗಿ ಪರಿವರ್ತನೆಗೊಂಡವು. ಪ್ರಾರಂಭದಲ್ಲಿ ದೊಡ್ಡಗರಡಿ, ಚಿಕ್ಕಗರಡಿ, ಹತ್ತುಜನರ ಗರಡಿ, ಹೊಸ ಗರಡಿ ಎಂದು ಕರೆಸಿಕೊಳ್ಳುತ್ತಿದ್ದವು. 1924ರಲ್ಲಿ ದೊಡ್ಡ ಗರಡಿ ಶ್ರೀರಾಮ ಮಂದಿರವಾಗಿ ಪರಿವರ್ತನೆಗೊಂಡಿತು. 1948ರಲ್ಲಿ ಚಿಕ್ಕ ಗರಡಿ ಶ್ರೀರಾಮಮಂದಿರವಾಗಿ ನಾಮಾಂಕಿತಗೊಂಡಿತು. 1964ರಲ್ಲಿ ಹತ್ತು ಜನಗಳ ಗರಡಿ ಶ್ರೀರಾಮ ಮಂದಿರ ಎಂದು, 1967ರಲ್ಲಿ ಹೊಸ ಗರಡಿ ಶ್ರೀರಾಮಮಂದಿರ ಎಂದು ಹೆಸರನ್ನು ಬದಲಾಯಿಸಿಕೊಂಡವು.

ಗಾಂಧೀಜಿ ಅವರು ಭೇಟಿಕೊಟ್ಟ ನಂತರ ಗರಡಿ ಮನೆಗಳ ಸಾಮಾನ್ಯ ಚಟುವಟಿಕೆಗಳ ಜೊತೆಗೆ ರಾಮನ ಪೂಜೆ, ಭಜನೆಗಳು ಪ್ರಾರಂಭವಾದವು. ವಾರದಲ್ಲಿ ಒಂದು ದಿನ, ಒಂದು ಗುಂಪಿನ ಸದಸ್ಯ ಮನೆಗಳ ಗಂಡು ಮಕ್ಕಳು ಸೇರಿ ಭಜನೆ, ದೇವರನಾಮ, ತತ್ವಪದ, ಕೀರ್ತನೆಗಳನ್ನು ಹಾಡುತ್ತಿದ್ದರು.

**ಗರಡಿ ಮನೆಯ ಸಾಧನಗಳು**

ಕುಸ್ತಿಪಟುಗಳು ಗರಡಿ ಮನೆಯಲ್ಲಿ ದೈಹಿಕ ಕಸರತ್ತು ಮಾಡಲು ಮರದ ಮತ್ತು ಕಬ್ಬಿಣದ ಸಲಕರಣೆಗಳನ್ನು ಬಳಸುತ್ತಾರೆ. ತೋಳುಗಳನ್ನು ಗಟ್ಟಿ ಮಾಡಲು ಮರದ ಗದೆಯನ್ನು, ಕಬ್ಬಿಣದ ಮತ್ತು ಕಲ್ಲಿನ ಗುಂಡುಗಳನ್ನು ಬಳಸುತ್ತಾರೆ. ಅಲ್ಲದೆ ಮಲ್ಲಗಂಬ, ಗದೆ, ಡಂಬಲ್ಸ್, ಬಾರು, ಕೊಂತ್ರ, ಗಾಲಿ, ಗುಂಡು, ಗುದ್ದಲಿ, ಮೊದಲಾದ ಸಲಕರಣೆಗಳನ್ನು ಬಳಸುತ್ತಾರೆ.

**ಗರಡಿ ಮನೆಯ ದೈಹಿಕ ಕಸರತ್ತುಗಳು**

ದೈಹಿಕ ಬಲಕ್ಕಾಗಿ ಮರ ಮತ್ತು ಲೋಹದ ಸಾಧನ ಸಲಕರಣೆಗಳನ್ನು ಬಳಸಿ ಕಸರತ್ತು ಮಾಡುವುದು ಒಂದು ಕ್ರಮವಾದರೆ, ಯಾವುದೇ ಸಾಧನ ಸಲಕರಣೆಗಳಿಲ್ಲದೆ ದಂಡ, ಬಸ್ಕಿಗಳನ್ನು ಹೊಡೆಯುತ್ತಾ, ಕಸರತ್ತು ಮಾಡುವುದು ಇನ್ನೊಂದು ಕ್ರಮವಾಗಿದೆ. ಬಸ್ಕಿಯಲ್ಲೂ ಅನೇಕ ವಿಧಗಳಿವೆ. ಕಾಲು ಹಿಮ್ಮಡಿಗಳನ್ನು ಸ್ವಲ್ಪ ಮೇಲೆತ್ತಿ ಮುಂಗಾಲುಗಳಲ್ಲಿ ನಿಂತು ಹೊಡೆಯುವ ಬಸ್ಕಿ. ಎರಡು ಕೈಗಳನ್ನು ಬೆನ್ನ ಹಿಂಬದಿಯಲ್ಲಿ ಕಟ್ಟಿಕೊಂಡು ಹೊಡೆಯುವ ಬಸ್ಕಿ, ಗೋಡೆ ಅಥವಾ ಕಂಬಗಳ ಆಸರೆ ಪಡೆದು ಹೊಡೆಯುವ ಬಸ್ಕಿ. ಹಿಂದಕ್ಕೆ ಮುಂದಕ್ಕೆ ಜಿಗಿದು ಹೊಡೆಯುವ ಬಸ್ಕಿ. ಹೆಗಲ ಮೇಲೆ ಯಾರನ್ನಾದರೂ ಕೂರಿಸಿಕೊಂಡು ಅಥವಾ ಹೆಗಲ ಮೇಲೆ ಭಾರವನ್ನು ಹೊತ್ತು ಹೊಡೆಯುವ ಬಸ್ಕಿ. ಹೀಗೆ ಅನೇಕ ರೀತಿಯಲ್ಲಿ ಬಸ್ಕಿ ಹೊಡೆಯುತ್ತಾರೆ.

ದಂಡ ಎಂದರೆ ಎರಡು ಕಾಲುಗಳನ್ನು ಹಿಂದೆ ಇಟ್ಟು ಮುಂಗೈಗಳನ್ನು ನೆಲದ ಮೇಲೆ ಮುಂದಕ್ಕಿಟ್ಟು ದೇಹವನ್ನು ಮೇಲೆ ಮತ್ತು ಕೆಳಗೆ ಆಡಿಸುವ ವಿಧಾನ ದಂಡ. ಹಾಗೆಯೇ ಇದರಲ್ಲೂ ಹಲವು ವಿಧಗಳಿವೆ. ಅವುಗಳೆಂದರೆ ಕೈಗಳನ್ನು ನೆಲಕ್ಕೂರಿ ಮುಂಡದ ಸಹಾಯದಿಂದ ದೇಹದ ಯಾವ ಭಾಗವೂ ಅಲುಗದಂತೆ ಸಮನಾಗಿ ಮೇಲೆತ್ತಿ ಕೆಳಗಿಳಿಸುವ 'ಸಮದಂಡ'. ಹಾಗೆ ಎರಡು ಕೈಗಳನ್ನು ನೆಲಕ್ಕೆ ಊರಿ ದಂಡ ಹೊಡೆದು ಕತ್ತನ್ನು ಬಲಭಾಗದ ಕೈ ಸಂಧಿಯಲ್ಲಿ ಒಮ್ಮೆ, ಎಡಭಾಗದ ಕೈ ಸಂಧಿಯಲ್ಲಿ ಒಮ್ಮೆ ತೂರಿಸಿ ಹೊಡೆಯುವ ದಂಡೆ ಇದಾಗಿರುತ್ತದೆ. ಇದನ್ನು 'ಚಕ್ರದಂಡೆ' ಎನ್ನುತ್ತಾರೆ. ಎರಡು ಕೈಗಳನ್ನು ನೆಲಕ್ಕೆ ಊರಿ ಒಂದು ದಂಡೆ

ಹೊಡೆದು ಎರಡು ಕಾಲುಗಳನ್ನು ಕೈಗಳ ಹತ್ತಿರ ತಂದು ಮತ್ತೆ ಎರಡು ಕಾಲುಗಳನ್ನು ಹಿಂದಕ್ಕೆ ತಳ್ಳಿ ಮುಂದೆ ತರುವ ದಂಡ. ಇದನ್ನು ಜೋಡಿ ಕಾಲುದಂಡೆ ಎಂದು ಕರೆಯುತ್ತಾರೆ. ಇದರಲ್ಲಿ ಇನ್ನೂ ಅನೇಕ ಬಗೆಗಳಿದ್ದು ಇದರ ಜೊತೆಗೆ ಓಡುವುದು, ಚಾಮುಂಡಿ ಬೆಟ್ಟದ ಮೆಟ್ಟಿಲುಗಳನ್ನು ಹತ್ತುವುದು, ಹುಲಿ ಹೆಜ್ಜೆ, ಈಜುವುದು, ಡಾವು ಅಥವಾ ಪಟ್ಟು ಹಾಕುವುದು, ಇವೆಲ್ಲವೂಗಳನ್ನು ಗರಡಿಯ ಹೊರಗಡೆ ಮಾಡುವ ಕಸರತ್ತುಗಳಾಗಿರುತ್ತದೆ. ಹಾಗೆ ಕುಸ್ತಿಯಲ್ಲಿ ಪ್ರತಿಸ್ಪರ್ಧಿಯನ್ನು ಹೇಗೆ ಎದುರಿಸಬೇಕು, ಗೆಲುವನ್ನು ಹೇಗೆ ಸಂಪಾದಿಸಬೇಕು ಎಂಬುದನ್ನು ಗುರುಗಳಾದವರು ಕಲಿಸುತ್ತಾರೆ. ಡಾವುಗಳು ಕುಸ್ತಿಯಲ್ಲಿ ಹೇಗೆ ಬಳಕೆಯಾಗುತ್ತವೆ ಎಂಬುದನ್ನು ಏಕ್ ಲಾಂಗ್, ಲುಕ್ ಅನ್, ಕಳವಾರ್ ಜಂಗ್, ಡೋಬಿಸಾಟ್, ದಸ್ತಿ, ಜೋಡಿಪಟ್ಟ್, ಬಯರ್ ಟಾಂಗ್, ಸವಾರಿ, ಕತ್ತರಿ, ಬಗಲ್ ಮಾಡೋದು, ಡುಬ್ ಮುಳುಗುವುದು ಹೀಗೆ ಹಲವು ಬಗೆಯ ಪಟ್ಟುಗಳನ್ನು ಹೇಳಿಕೊಡುತ್ತಾರೆ. ಈ ಮೇಲಿನ ಎಲ್ಲಾ ಕಸರತ್ತುಗಳು ಗರಡಿ ಮನೆಯಲ್ಲಿಯೇ ನಡೆಯುತ್ತಿದ್ದವು.

ಸಾಮನ್ಯವಾಗಿ ಗರಡಿ ಮನೆಗಳಲ್ಲಿ ಅಂಗ ಸಾಧನೆಗೆ ಮಾಲಿಷ್ ಮಾಡುವಿಕೆ ಅಥವಾ ಅಂಗಮರ್ದನ ಕಲೆಯನ್ನು ಬಳಸುತ್ತಿದ್ದರು. ಏಕೆಂದರೆ ದೇಹಕ್ಕೆ ಮಾಲಿಷ್ ಮಾಡುವುದರಿಂದ ದೇಹದ ವಿವಿಧ ಅಂಗಗಳು ಮೃದುವಾಗಿ ಹಗುರವಾಗಿ ಮಾರ್ಪಾಡಾಗುತ್ತವೆ ಹಾಗೂ ಮಾಡಿದ ಕಸರತ್ತುಗಳಿಂದ ಉಂಟಾದ ದೇಹದ ಆಯಾಸ ನಿವಾರಣೆಯಾಗುತ್ತದೆ.

**ಗರಡಿ ಮನೆಯ ಪೈಲ್ವಾನರ ಆಹಾರ ಕ್ರಮ**

ಪೈಲ್ವಾನರು ಮಾಡುವ ಊಟದಲ್ಲಿ ಪೌಷ್ಟಿಕಾಂಶಗಳು ಹೆಚ್ಚಾಗಿರುತ್ತದೆ. ಸಾಮಾನ್ಯರ ಆಹಾರ ಪದ್ಧತಿಗಿಂತ ಸ್ವಲ್ಪ ಭಿನ್ನವಾಗಿರುತ್ತದೆ. ಬೆಳಗಿನ ವ್ಯಾಯಾಮ ಮುಗಿಸಿದ ನಂತರ ಬಾದಾಮಿ, ಕಲ್ಲುಸಕ್ಕರೆ, ಸೋಂಪು ಕಾಳು, ಏಲಕ್ಕಿ, ಮೆಣಸನ್ನು ಕುಟ್ಟಿ ನುಣ್ಣಗೆ ಮಾಡಿ, ಅರೆದು ಸ್ವಲ್ಪ ನೀರನ್ನು ಬೆರೆಸಿ ಒಂದು ಬಿಳಿಯ ಬಟ್ಟೆಯಲ್ಲಿ ಹಾಕಿ ಹಿಂಡಿದ ರಸವನ್ನು ಸಬ್ಜಿಯ ಮುಖಾಂತರ ಸೇವಿಸುತ್ತಿದ್ದರು ಇದನ್ನು 'ಬಾದಾಮಿ ತಂಡ' ಎಂದು ಕರೆಯುತ್ತಾರೆ. ಇದನ್ನು ಸೇವಿಸುವುದರಿಂದ ಪೈಲ್ವಾನರ ಶಕ್ತಿ ಹೆಚ್ಚಾಗುತ್ತಿತ್ತು.

ಇದನ್ನು ಬಿಟ್ಟರೆ ರಾಗಿ ಮುದ್ದೆ, ಚಪಾತಿ, ಕುರಿ, ಮೇಕೆ, ಕೋಳಿ, ಮೀನಿನ ಸಾರನ್ನು ಬಳಸುತ್ತಾರೆ. ಮೇಕೆ, ಕುರಿಯ ಕಾಲುಗಳನ್ನು ಚೆನ್ನಾಗಿ ಬೇಯಿಸಿ ಅದರ 'ಸೇರ್ವ'ವನ್ನು ಸೇವಿಸುತ್ತಾರೆ. ಇದು ಪೈಲ್ವಾನರ ಕಾಲು ಮತ್ತು ನರಗಳನ್ನು ಗಟ್ಟಿಗೊಳಿಸುತ್ತದೆ. ಹಾಲು, ಮೊಟ್ಟೆ, ಸೊಪ್ಪು–ತರಕಾರಿಗಳನ್ನು ಸೇವಿಸುತ್ತಾರೆ. ಅಲ್ಲದೆ ಬಾದಾಮಿ, ಗೋಡಂಬಿ, ದ್ರಾಕ್ಷಿಗಳನ್ನು ಸೇವಿಸುತ್ತಿದ್ದರು. ಪೈಲ್ವಾನರ ಊಟವು ಬಹಳ ಪೌಷ್ಟಿಕಾಂಶಗಳಿಂದ ಕೂಡಿರುತ್ತಿತ್ತು. ಕುಸ್ತಿಗೆ ಹೋಗುವ ಕೆಲವು ದಿನಗಳ ಮೊದಲು ಹೀಗೆ ಇನ್ನೂ ಹೆಚ್ಚಾಗಿ ತಿಂದು ಶಕ್ತಿ ಹೆಚ್ಚಿಸಿಕೊಂಡು ಕುಸ್ತಿ ಮಾಡಿ ಬರುತ್ತಿದ್ದರು.

**ಗರಡಿ ಮನೆಯ ಆಚರಣೆಗಳು**

ಗರಡಿ ಮನೆಯಲ್ಲಿ ಆಂಜನೇಯ ಸ್ವಾಮಿ, ಶಿವ, ಗಣಪತಿಯನ್ನು ಪೂಜಿಸುತ್ತಾರೆ. ಅಂಬಾ ಭವಾನಿ ಅಥವಾ ಮೌಲಾಲಮ್ಮ ಆಕಾರವಿಲ್ಲದ ದೇವತೆಯಾದರೂ ಚಾಮುಂಡೇಶ್ವರಿಯಂತೆ ಶಕ್ತಿ ದೇವತೆ ಎಂಬ

ನಂಬಿಕೆಯಿಂದ ಸಾಧನ ಸಲಕರಣೆಗಳನ್ನೇ ಜೋಡಿಸಿಟ್ಟು ಅವುಗಳನ್ನೇ ದೇವತೆಗಳೆಂದು ಅಮಾವಾಸ್ಯೆ, ಹುಣ್ಣಿಮೆ ಹಾಗೂ ಹಬ್ಬ ಹರಿದಿನಗಳಂದು ಪೂಜಿಸುತ್ತಾರೆ. ಗರಡಿ ಮನೆಯ ಮಣ್ಣನ್ನು ವರ್ಷಕ್ಕೊಮ್ಮೆ ಬದಲಾಯಿಸುತ್ತಾರೆ. ವರಮಹಾಲಕ್ಷ್ಮಿ ಹಬ್ಬದ ಶುಕ್ರವಾರದ ದಿನದಂದು 'ಮಟ್ಟಿ' ತರುವ ಆಚರಣೆ ಇದೆ. ಆ ದಿನ ಗರಡಿಯ ಎಲ್ಲ ಸದಸ್ಯರು ಸೇರಿ ಮೊದಲು ಗರಡಿಯನ್ನು ಸ್ವಚ್ಛಗೊಳಿಸಿದ ನಂತರ ಗಾಂಧಿನಗರದ ಸುತ್ತಮುತ್ತಲ್ಲೇ ಇರುವ ಕೆರೆಯ ಮಗ್ಗುಲುಗಳಲ್ಲಿ ಸಿಗುತ್ತಿದ್ದು ಮಣ್ಣನ್ನು ತರುತ್ತಿದ್ದರು. ಮೊದಲು ಹೊಸದಾಗಿ ತಂದ ಬಿದಿರಿನ ಕುಕ್ಕೆಗಳಲ್ಲಿ ಮಟ್ಟಿಯನ್ನು ಪೂಜೆ ಮಾಡಿ ಗೋಪುರಾಕೃತಿಯಲ್ಲಿ ತುಂಬಿ ತರುತ್ತಿದ್ದರು. ಪ್ರತಿಯೊಬ್ಬ ಪೈಲ್ವಾನರು ಅದನ್ನು ತಲೆಯ ಮೇಲೆ ಹೊತ್ತು ಬರುತ್ತಾರೆ. ಅದಕ್ಕೆ ಅರಿಶಿಣ, ಕುಂಕುಮ, ಹೂ, ನಿಂಬೆ ಹಣ್ಣನ್ನು ಹಾಕಿರುತ್ತಾರೆ. ಗರಡಿ ಮನೆಗೆ ಬರುವವರೆಗೂ ಕುಕ್ಕೆಯನ್ನು ಎಲ್ಲೂ ಇಡುವಂತಿಲ್ಲ. ಬೇರೆ ಯಾರ ಕೈಗೂ ಸಹ ಕೊಡುವಂತಿಲ್ಲ. ಮಟ್ಟಿಯ ಮಣ್ಣನ್ನು ಹೊತ್ತು ತರುವಾಗ ಕೆಲವರು ಕಬ್ಬಿನ ಜಲ್ಲೆಗಳನ್ನು ಅಭಿವೃದ್ಧಿಯ ಸಂಕೇತವಾಗಿ ಹಿಡಿದು ಕೊಂಡಿರುತ್ತಾರೆ. ಮೆರವಣಿಗೆಯ ಮುಂಭಾಗದಲ್ಲಿ ವಾದ್ಯ ಮೇಳ ಇರುತ್ತವೆ. ಮಟ್ಟಿಯನ್ನು ತಂದು ಗರಡಿಯ ಒಳಭಾಗದಲ್ಲಿ ಇಟ್ಟು ಮತ್ತೆ ಪೂಜೆ ಮಾಡುತ್ತಾರೆ. ಪೂಜೆಯ ಸಂದರ್ಭದಲ್ಲಿ ಅಂಬಾ ಮಟ್ಟಿ ಲಾಲ್ ಮಟ್ಟಿ ಎಂದು ಕೂಗಿ ಪೂಜಿಸುತ್ತಿದ್ದರು. ಪೂಜೆಯಾದ ನಂತರ ಎಲ್ಲರಿಗೂ ಕಡ್ಲೆಪುರಿಯನ್ನು ವಿತರಿಸುತ್ತಾರೆ. ಈಗ ಎತ್ತಿನ ಗಾಡಿಗಳಲ್ಲಿ ಮಟ್ಟಿ ಮಣ್ಣುಗಳನ್ನು ತರುತ್ತಾರೆ. ಕುಸ್ತಿ ಮಾಡುವಾಗ ಪೆಟ್ಟಾಗದಿರಲೆಂದು ಮಣ್ಣಿನಲ್ಲಿ ಒಂದು ಸಣ್ಣ ಕಲ್ಲೂ ಸಹ ಇರದ ಹಾಗೆ ಆಯ್ದಿರುತ್ತಾರೆ. ಕುಸ್ತಿ ಮಾಡುವಾಗ ಸಣ್ಣ ಪುಟ್ಟ ಗಾಯಗಳಾದರೆ, ಅದಕ್ಕೆ ಮಟ್ಟಿ ಮಣ್ಣೇ ಮದ್ದು. ಅರಿಶಿಣ, ಕುಂಕುಮ, ಗಂಧದಪುಡಿ, ಬೆರಕೆಎಣ್ಣೆ, ದೇವದಾರು, ಕರ್ಪೂರವು ಈ ಮಣ್ಣಿನಲ್ಲಿ ಮಿಶ್ರಣವಾಗಿರುತ್ತದೆ. ಅಲ್ಲದೆ ಈ ಮಣ್ಣಿನಲ್ಲಿ ಕ್ರಿಮಿನಾಶಕ ಗುಣವಿರುವುದರಿಂದ ಪೈಲ್ವಾನ್‌ಗಳು ಈ ಮಣ್ಣನ್ನು ಸವರುತ್ತಾರೆ ಆಗ ರಕ್ತ ಬರುತ್ತಿದ್ದರೂ ಥಟ್ಟನೆ ನಿಂತು ಬಿಡುತ್ತದೆ ಎಂದು ಅಲ್ಲಿನವರ ನಂಬಿಕೆಯಾಗಿದೆ.

ಗಾಂಧಿನಗರದ ಗರಡಿ ಮನೆಗಳು ಊರಿನಲ್ಲಿ ಆಚರಿಸುವ ಎಷ್ಟೋ ಪೂಜೆ, ಆಚರಣೆಗಳಿಗೆ ನಾಂದಿಯಾಗಿವೆ. ಮೈಸೂರಿನಲ್ಲಿ ಮೊಟ್ಟ ಮೊದಲ ಬಾರಿಗೆ ಧನುರ್ಮಾಸ ಆಚರಣೆ ಪ್ರಾರಂಭಿಸಿದ ಹೆಗ್ಗಳಿಕೆಯು ಈ ಊರಿನ ಗರಡಿ ಮನೆಗೆ ಸಲ್ಲುತ್ತದೆ. 1901ರಲ್ಲಿ ಸ್ಥಳೀಯರಾದ ವೆಂಕಟಪ್ಪ ಉ॥ ಬುಸ್ಕುಲಯ್ಯ ಇವರು ಸಂಕ್ರಾಂತಿ ಭಜನೆಯನ್ನು ತಿಂಗಳ ಪೂರ ನಡೆಸಿದ ಪ್ರಥಮ ವ್ಯಕ್ತಿ. ಇದರ ಜೊತೆಗೆ ಗರಡಿ ಮನೆಯಲ್ಲಿ ಹಿಂದಿನ ಕಾಲದಿಂದಲೂ ಜಾತ್ರೆಗಳ ಸಂದರ್ಭದಲ್ಲಿ ಜನರಿಗೆ ಪ್ರಯಾಣ ನಡೆಸಲು ಅನುವು ಮಾಡಿಕೊಡಲಾಗುತ್ತಿತ್ತು. ಉದಾಹರಣೆಗೆ: ಮಲೈ ಮಹಾದೇಶ್ವರ ಜಾತ್ರೆ, ಸಿದ್ದಪ್ಪಾಜಿ ಜಾತ್ರೆ, ಚೆಲುವರಾಯಸ್ವಾಮಿ ಜಾತ್ರೆ, ಗೌಡರಹಳ್ಳಿ ಜಾತ್ರೆ, ಚುಂಚನಗಿರಿ ಜಾತ್ರೆ ಮೊದಲಾದ ಜಾತ್ರೆಗಳಿಗೆ ಹೋಗಲು ಜನರಿಗೆ ಅನುಕೂಲ ಮಾಡಿಕೊಡುತ್ತಿದೆ.

**ಗರಡಿ ಮನೆಯ ಚಟುವಟಿಕೆಯಲ್ಲಿ ಭಾಗವಹಿಸುತ್ತಿದ್ದ ಪ್ರಮುಖರು**

ಗರಡಿ ಮನೆಯ ಚಟುವಟಿಕೆಗಳಲ್ಲಿ ಹಲವು ವ್ಯಕ್ತಿಗಳು ಬೆನ್ನೆಲುಬಾಗಿ ನಿಂತು ಯಶಸ್ವಿ ಪೈಲ್ವಾನರನ್ನು ತಯಾರು ಮಾಡುತ್ತಿದ್ದರು. ಸಾಮಾನ್ಯವಾಗಿ ಪೈಲ್ವಾನರನ್ನು ತಯಾರು ಮಾಡುವ ಮುಖಂಡರು ಹಿಂದೆ

ಪೈಲ್ವಾನರಾಗಿ ಸಾಕಷ್ಟು ಕುಸ್ತಿಯನ್ನು ಮಾಡಿ ಅನುಭವವನ್ನು ಪಡೆದವರಾಗಿದ್ದರು. ತಮ್ಮ ಅನುಭವಗಳ ಮೂಲಕ ಮುಂದಿನ ಪೈಲ್ವಾನರನ್ನು ತಯಾರು ಮಾಡಿ ಗರಡಿ ಹೆಸರನ್ನು ಶಾಶ್ವತವಾಗಿ ಉಳಿಸುವ ಪ್ರಯತ್ನಕ್ಕೆ ಈ ಮುಖಂಡರೆಲ್ಲರೂ ಶ್ರಮಿಸುತ್ತಿದ್ದರು. ಆದ್ದರಿಂದ ಗರಡಿ ಮನೆಯ ಮುಖಂಡರಿಗೆ ವಿಶೇಷ ಗೌರವವಿತ್ತು. ಏಕೆಂದರೆ ಇವರು ಸಹಕಾರ, ಪ್ರೀತಿ, ಅನುಕಂಪ, ನ್ಯಾಯ ಇತ್ಯಾದಿ ಮೌಲ್ಯಗಳಿಗೆ ತಮ್ಮದೇ ಆದ ಪ್ರಾಧಾನ್ಯತೆ ನೀಡಿದ್ದರು.

**ಗಾಂಧಿನಗರದ ಪ್ರಸಿದ್ಧ ಪೈಲ್ವಾನರು**

ಗಾಂಧಿನಗರದಲ್ಲಿ ಪೈಲ್ವಾನರು ರಾಜರ ಕಾಲದಿಂದಲೂ ಕುಸ್ತಿ ಕಲೆಗೆ ಪ್ರಸಿದ್ಧರಾದವರು. ರಾಜ ಮಹಾರಾಜರ ಮುಂದೆ ಕುಸ್ತಿ ಮಾಡಿ, ಪ್ರಸಿದ್ಧಿ, ಪ್ರಶಸ್ತಿ ಗೆದ್ದ ಪೈಲ್ವಾನ್‌ರು ಕಂಡುಬರುತ್ತಾರೆ. ಗಾಂಧಿನಗರದಲ್ಲಿ ಕಂಡುಬರುವ ಪ್ರಮುಖ ಪೈಲ್ವಾನರುಗಳಾದ ಪೈಲ್ವಾನ್ ರಾಮಯ್ಯ, ಪೈಲ್ವಾನ್ ಮರಡಪ್ಪ, ಪೈಲ್ವಾನ್ ರಂಗಯ್ಯ ಉ॥ ಕಾಟಪ್ಪ, ಪೈಲ್ವಾನ್ ಪರ್ಚೆತಿಮ್ಮಯ್ಯ, ಪೈಲ್ವಾನ್ ಚಲ್ಲಣ್ಣ, ಪೈಲ್ವಾನ್ ಯೋಗೇಶ್ ಇವರುಗಳು ಜನರ ಮುಂದೆ ಕುಸ್ತಿ ಮಾಡಿ ಹಲವಾರು ಪ್ರಶಸ್ತಿಗಳನ್ನು ಪಡೆದವರಾಗಿದ್ದಾರೆ. ಪ್ರಸ್ತುತದಲ್ಲಿ ಕಂಡುಬರುವ ಪೈಲ್ವಾನರುಗಳೆಂದರೆ ಲೋಕೇಶ, ಮರಿಸ್ವಾಮಿ, ಸಂಜೀವಮೂರ್ತಿ, ರಾಜು, ಸಂತೋಷ್, ನಾಗರಾಜ್, ಮಧುಸೂಧನ್ ಮತ್ತು ರೂಪೇಶ್ ಎಂಬುವವರು.

**ಉಪಸಂಹಾರ**

ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಗಾಂಧಿನಗರದಲ್ಲಿ ಗರಡಿ ಮನೆಯು ಸ್ಥಾಪನೆಯಾಗಿ ಕುಸ್ತಿ ಕಲೆಯು ತನ್ನದೇ ಆದ ಐತಿಹಾಸಿಕ ಮಹತ್ವವನ್ನು ಹೊಂದಿದೆ ಎಂದು ಹೇಳಬಹುದು. ಗಾಂಧಿನಗರದ ಗರಡಿ ಮನೆಗಳಲ್ಲಿ ಪವಿತ್ರವಾದ ಗಂಡುಕಲೆಯು ತನ್ನದೇ ಆದ ಛಾಪನ್ನು ಮೂಡಿಸಿರುವುದು ಕಂಡುಬರುತ್ತದೆ. ಗಾಂಧಿನಗರದ ಪ್ರಾರಂಭದಲ್ಲಿದ್ದ ನಾಲ್ಕು ಗರಡಿ ಮನೆಗಳು ಪ್ರಸುತ್ತ ರಾಮಮಂದಿರವಾಗಿ ಪರಿವರ್ತನೆಗೊಂಡಿದ್ದರು ಸಹ ಈ ಗರಡಿ ಮನೆಗಳು ತನ್ನದೇ ಆದ ಛಾಪುನ್ನು ಉಳಿಸಿಕೊಂಡು ಹಲವಾರು ಪೈಲ್ವಾನ್‌ರವರುಗಳನ್ನು ಹೊರತರುವಲ್ಲಿ ಯಶ್ವಸಿಯತ್ತ ಸಾಗುತ್ತಿದೆ.

**ಪರಾಮರ್ಶನಾ ಗ್ರಂಥಗಳು**


- ಅರವಿಂದ ಮಾಲಗತ್ತಿ. (2005). ಕನ್ನಡ ವಿಷಯ ವಿಶ್ವಕೋಶ ಸಂಪುಟ–1. ಮೈಸೂರು ವಿಶ್ವವಿದ್ಯಾಲಯ, ಮೈಸೂರು.
- ನಮ್ಮ ಮೈಸೂರು. (09.12.2010). ವಿಜಯ ಕರ್ನಾಟಕ ದಿನಪತ್ರಿಕೆ. ಬೆಂಗಳೂರು.
- ವರದರಾಜನ್. ವಿ.ಪಿ. (1967). ಮಲ್ಲಯುದ್ಧ. ಪದ್ಮನಾಭ ಪ್ರಿಂಟರ್ಸ್, ಬೆಂಗಳೂರು.


**ವಕ್ತೃ ವಿವರ**

- ಪೈಲ್ವಾನ್ ನಾಗರಾಜು. (56). ತರಬೇತುದಾರರು, ಗಾಂಧಿನಗರ, ಮೈಸೂರು.
- ಪೈಲ್ವಾನ್ ಪುಟ್ಟಸ್ವಾಮಿ (57). ಉ॥ ಡಿಸೆಲ್ ಕೆ.ಎಸ್.ಆರ್.ಟಿ.ಸಿ. ನೌಕರರು, ಗಾಂಧಿನಗರ, ಮೈಸೂರು.